ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಸದಸ್ಯರು ವಿವಿಧ ವಿಚಾರಗಳನ್ನು ಹೇಳಿದ್ದಾರೆ, ಅದನ್ನು ನನ್ನ ಮನಸ್ಸಿನಲ್ಲಿಟ್ಟುಕೊಂಡು ಅದಷ್ಟೂ ಆದರಂತೆ ನಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಬೆಂಗಳೂರು ನಗರದಲ್ಲಿ ಹೊಸ ಪಡಿತರ ಚೀಟಿಗಳನ್ನು ಹಂಚುವ ಬಗ್ಗೆ

೧೯೪. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜನವರಿ ೧೯೯೦ನೇ ತಿಂಗಳಿನಿಂದ ಹೊಸ ಪಡಿತರ ಚೀಟಿಗಳಿಗಾಗಿ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಕೇಂದ್ರ ಪಲಯ ಕಛೇರಿಯಿಂದ ಎಷ್ಟು ಪಡಿತರ ಚೀಟಿಗಳ ಅರ್ಜಿ ಫಾರಂಗಳನ್ನು ವಿತರಣೆ ಮಾಡಿದೆ ?

ಆ) ಅದರಲ್ಲಿ ಎಷ್ಟು ಅರ್ಜಿ ಫಾರಂಗಳನ್ನು ಹೊಸ ಪಡಿತರ ಚೀಟಿಗಳಿಗಾಗಿ ಸಲ್ಲಿಸಲಾಗಿದೆ ?

ಇ) ಜನವರಿ ೧೯೯೦ ರಿಂದ ಈ ವರೆಗೆ ಎಷ್ಟು ಹೊಸ ಪಡಿತರ ಚೀಟಿಗಳನ್ನು ವಿತರಣೆ ಮಾಡಲಾಗಿದೆ.

ಈ) ಬಾಕಿ ಉಳಿದಿರುವ ಅರ್ಜಿ ಫಾರಂಗಳು ಎಷ್ಟು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ೪,೫೭೮

ಆ) ೪,೪೫೨

ಇ) ೨,೪೪೪

ಈ) ೨,೦೦೪

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ಅಧ್ಯಕ್ಷರೇ, ಆಹಾರ ಸಚಿವರು ಕೊಟ್ಟಿರುವ ಉತ್ತರವನ್ನು ನೋಡಿದೆ. ಆದರೆ ನಮ್ಮ ಬೆಂಗಳೂರು ನಗರದಲ್ಲಿ ಎರಡು ಲಕ್ಷ ಜನ ರೇಷನ್ ಕಾರ್ಡ್ ಇಲ್ಲದೆ ಬಹಳ ಪರದಾಡುತ್ತಿದ್ದಾರೆ. ಹಿಂದಿನ ಆಹಾರ ಸಚಿವರು ಭರವಸೆ ಕೊಟ್ಟಿದ್ದರು. ಸಿಂಗಲ್ ವಿಂಡೊ ಏಜೆನ್ಸಿ ಮಾಡುತ್ತೇನೆಂದು ಆದರೆ ಅದು ಇನ್ನೂ ಜಾರಿ ಆಗಿಲ್ಲ. ನಮ್ಮಲ್ಲಿ ೬ ವಲಯಂಗಳದ್ದು ೬ ಜನ ಡಿ. ಡಿ. ಗಳಿದ್ದಾರೆ, ೬ ಜೀಪ್‌ಗಳಿವೆ. ಹಾಗೂ ಸಿಬ್ಬಂದಿಗಳಿದ್ದಾರೆ. ಅವರು ೧೧ ತಿಂಗಳಲ್ಲಿ ತಲಾ ತಿಂಗಳಿಗೆ ೨೦೪ ರಂತೆ ಹೊಸ ಕಾರ್ಡ್ ಕೊಟ್ಟಿದ್ದಾರೆ. ಆದರೆ ಕಾಯುತ್ತಿರುವವರು ಎರಡು ಲಕ್ಷ ಜನ. ಈ ಸಭೆಯಲ್ಲಿ ಹಿಂದೆ ಕೊಟ್ಟ ಭರವಸೆಯಂತೆ ಸಿಂಗಲ್ ವಿಂಡೋ ಏಜೆನ್ಸಿ ಇವತ್ತಿಗೂ ಜಾರಿ ಆಗಲಿಲ್ಲ. ರೇಷನ್ ಕಾರ್ಡ್ ಇವತ್ತು ಬಹಳ ಅವಶ್ಯಕವಾಗಿದೆ, ಅದು ಗುರುತಿನ ಚೀಟಿ ಇದ್ದಂತೆ. ಯಾವುದಾದರೂ ಲೋನ್ ತೆಗೆದುಕೊಳ್ಳಬೇಕಾದರೆ ಅದು ಬೇಕು. ಡ್ರೈವಿಂಗ್ ಲೈಸೆನ್ಸ್ ಮಾಡಿಸಬೇಕಾದರೆ ರೇಷನ್ ಕಾರ್ಡ್ ಬೇಕು. ಸೀಮೆ ಎಣ್ಣೆಗಾಗಿ ಒಂದೊಂದು ಫಲ್ಯಾಂಗ್ ಕ್ಯೂ ಇರುತ್ತದೆ. ಆದರೂ ರೇಷನ್ ಕಾರ್ಡ್ ಕೊಟ್ಟಿಲ್ಲ. ಆದ್ದರಿಂದ ಜಾಗ್ರತೆ ಎಲ್ಲರಿಗೂ ಪಡಿತರ ಚೀಟಿ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮತ್ತೆ ಹಿಂದಿನ ಆಹಾರ ಮಂತ್ರಿಗಳು ಒಂದು ಸರ್ಕ್ಯುಲರನ್ನು ಇಷ್ಯೂ ಮಾಡಿದ್ದರು, ಅದೇನೆಂದರೆ ಎಂ. ಎಲ್. ಎ. ಗಳು ಲೆಟರನ್ನು ಕೊಟ್ಟರೆ ರೇಷನ್ ಫಾರಂನ್ನು ಇಷ್ಯೂ ಮಾಡಬೇಡಿ ಎಂದು. ಅದು ಇನ್ನೂ ಕರೆನ್ಸಿಯಲ್ಲಿದಯೇ ? ಅಥವಾ ಅದನ್ನು ಏನಾದರೂ ವಿತ್‌ಡ್ರಾ ಮಾಡಿಕೊಂಡಿದ್ದೀರೋ ಹೇಗೆ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಯಾವುದೇ ಒಬ್ಬ ನಾಗರೀಕನಿಗೆ ರೇಷನ್ ಕಾರ್ಡನ್ನು ಕೊಡಬೇಕಾದರೆ ಅದರಲ್ಲಿ ಕೆಲವು ಪರತ್ತ್‌ಗಳು ಮತ್ತು ನಿಯಮಗಳಿರುತ್ತವೆ. ಆ ನಿಯಮಗಳನ್ನು ಅವರು ಪಾಲಿಸಬೇಕಾಗುತ್ತದೆ. ಮಾನ್ಯ ಸದಸ್ಯರು ಕೇಳಿದ ಕೊನೆಯ ಪ್ರಶ್ನೆಗೆ ಉತ್ತರವಾಗಿ ೨೦೦೪ ಮಂದಿ ಅರ್ಜಿದಾರರಿಗೆ ಹೊಸ ಕಾರ್ಡ್‌ಗಳನ್ನು ಕೊಟ್ಟಿಲ್ಲ ಎಂದು ಹೇಳಿದ್ದೇನೆ. ನಾಗರೀಕರು ಕೂಡಾ ಕೆಲವು ಮಾಹಿತಿಗಳನ್ನು ಕೊಡಬೇಕಾಗುತ್ತದೆ, ನಿರ್ದಿಷ್ಟವಾದಂಥ ಮಾಹಿತಿಗಳನ್ನು ಅವರು ಕೊಡದೇ ಇದ್ದಾಗ ಎಷ್ಟು ಮಂದಿ ಸಿಬ್ಬಂದಿ ವರ್ಗ ಇದ್ದರೂ ಕೂಡಾ ಅವರು

ಮಾಹಿತಿಗಳನ್ನು ಸರಿಯಾಗಿ ಕೊಡದಿದ್ದರೆ ಕಾರ್ಡ್‌ಗಳನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಸದಸ್ಯರಾದ ಪೆರಿಕಲ್ ಎಂ. ಮಲ್ಲಪ್ಪನವರು ನಿರ್ದಿಷ್ಟವಾದಂಥ ಮಾಹಿತಿಗಳನ್ನು ಕೊಟ್ಟಿದ್ದರೂ ಕೂಡಾ ಕಾರ್ಡುಗಳನ್ನು ಕೊಟ್ಟಿಲ್ಲ ಎಂದು ಒಂದು ನಿರ್ದಿಷ್ಟವಾದಂಥ ಪ್ರಕರಣವನ್ನು ಅವರು ನನ್ನ ಗಮನಕ್ಕೆ ತರುವುದಾದರೆ ನಾನು ನಾಳೆ ಸಾಯಂಕಾಲದ ಒಳಗಾಗಿ ಕಾರ್ಡ್‌ನ್ನು ಕೊಡಿಸುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಎಂ. ಪಿ. ವೆಂಕಟೇಶ್.—ಮೈಸೂರು ನಗರದಲ್ಲಿಯೂ ಕೂಡಾ ಬೇಕಾದಷ್ಟು ಕಾರ್ಡುಗಳನ್ನು ಕೊಟ್ಟಿಲ್ಲ.

ಅಧ್ಯಕ್ಷರು.—ನಿಮಗೆ ಏತಕ್ಕೆ ಗಾಬರಿ ? ನಾಳೆ ಸಾಯಂಕಾಲದ ಒಳಗಾಗಿ ಕಾರ್ಡನ್ನು ಕೊಡಿಸುತ್ತೇನೆ ಎಂದು ಮಂತ್ರಿಗಳು ಹೇಳಿದರೆ ನಿಮಗೆ ಏತಕ್ಕೆ ಗಾಬರಿ ?

ಶ್ರೀ ಎಂ. ಪಿ. ವೆಂಕಟೇಶ್.—ಎರಡು ವರ್ಷಗಳಿಂದಲೂ ಅರ್ಜಿಯನ್ನು ಕೊಟ್ಟು ರೇಷನ್ ಕಾರ್ಡ್‌ಗಾಗಿ ಕಾಯುತ್ತಿದ್ದಾರೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ಮಾನ್ಯ ಸಚಿವರು ೪,೫೭೮ ಪಡಿತರ ಚೀಟಿಗಳ ಅರ್ಜಿ ಫಾರಂಗಳನ್ನು ವಿತರಣೆ ಮಾಡಿದೆ ಎಂದು ಹೇಳಿದ್ದಾರೆ. ಮತ್ತು ಅದರಲ್ಲಿ ಹೊಸ ಪಡಿತರ ಚೀಟಿಗಳಿಗಾಗಿ ೪,೪೫೨ ಅರ್ಜಿ ಫಾರಂಗಳನ್ನು ಸಲ್ಲಿಸಲಾಗಿದೆ ಎಂದೂ ಹೇಳಿದ್ದಾರೆ. ಮತ್ತು ಜನವರಿ ೧೯೬೦ ರಿಂದ ಈವರೆಗೆ ೨,೪೪೮ ಪಡಿತರ ಚೀಟಿಗಳನ್ನು ವಿತರಣೆ ಮಾಡಲಾಗಿದೆ ಎಂದು ಹೇಳಿ ಕೊನೆಯದಾಗಿ ಬಾಕಿ ಉಳಿದಿರುವ ಅರ್ಜಿ ಫಾರಂಗಳು ಎಷ್ಟು ಎಂಬ ಪ್ರಶ್ನೆಗೆ ೨,೦೦೪ ಎಂದು ಹೇಳುತ್ತಾರೆ, ಆದರೆ ಕೊನೆಯ ಪ್ರಶ್ನೆಗೆ ಉತ್ತರ ಅವುಗಳನ್ನು ರಿಜೆಕ್ಟ್ ಮಾಡಿದ್ದೇವೆ ಎಂದೂ ಬರೆದಿಲ್ಲ. ೨,೦೦೪ ಅರ್ಜಿಗಳೂ ಕೂಡಾ ೧೧ ತಿಂಗಳಿಂದಲೂ ತಮ್ಮ ಇಲಾಖೆಯ ೬ ಜನ ಡೆಪ್ಯೂಟಿ ಡೈರೆಕ್ಟರ್ ಹತ್ತಿರ ಇವೆ. ಈ ರೀತಿ ಇದ್ದಾಗ ೨,೦೦೪ ಅರ್ಜಿಗಳನ್ನು ಮಾತ್ರ ಏತಕ್ಕೆ ಗಣನೆಗೆ ತೆಗೆದುಕೊಂಡಿದಿಲ್ಲ ಎಂದು ಪ್ರಶ್ನೆ ಮಾಡುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ. ೨೦೦೪ ಅರ್ಜಿದಾರರಿಗೆ ಮಾತ್ರ ಕಾರ್ಡನ್ನು ಕೊಟ್ಟಿಲ್ಲ ಎಂದು ಉತ್ತರದಲ್ಲಿ ಹೇಳಿದ್ದೇನೆ. ತಮ್ಮ ಅಭಿಪ್ರಾಯದಲ್ಲಿ ಅವರು ಎಲ್ಲಾ ಮಾಹಿತಿಯನ್ನೂ ಕೊಟ್ಟಿದ್ದು ನಮ್ಮ ಅಧಿಕಾರಿಗಳು ಕಾರ್ಡನ್ನು ಕೊಡದಿದ್ದರೆ ಅದರಲ್ಲಿ ಲೋಪ ಇದೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಕೇಳಿದ ಮಾಹಿತಿಯನ್ನೇ ಕೊಡದಿದ್ದರೆ ರೇಷನ್ ಕಾರ್ಡುಗಳನ್ನು ಕೊಡಿ ಎಂದು ಹೇಳಿದರೆ ಸರ್ಕಾರಕ್ಕೆ ಬಹಳ ಕಷ್ಟವಾಗುತ್ತದೆ ಎನ್ನುವ ಅಂಶವನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕಾಗುತ್ತದೆ.

(ಗೊಂದಲ)

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ಹಿಂದಿನ ಆಹಾರ ಮಂತ್ರಿಗಳು ಎಂ. ಎಲ್. ಎ. ಗಳಿಂ ಲೆಟರನ್ನು ಕೊಟ್ಟರೆ ರೇಷನ್ ಫಾರಂಗಳನ್ನು ಇಷ್ಯೂ ಮಾಡಬೇಡಿ ಎಂದು ಹೇಳಿದ್ದರು. ಅದು ಇನ್ನೂ ಕರೆನ್ಸಿಯಲ್ಲಿದೆಯೇ ?

(ಗೊಂದಲ)

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಇಲ್ಲಿ ಕೆಲವು ನಿಯಮಗಳಿರುತ್ತವೆ. ಅವುಗಳನ್ನು ನಾಗರೀಕರು ಪಾಲನೆ ಮಾಡಬೇಕಾಗುತ್ತದೆ.

ಶ್ರೀ ಆರ್. ದಯಾನಂದರಾವ್.—ಈಗ ತಾನೆ ನಾಳೆ ಸಾಯಂಕಾಲದೊಳಗಾಗಿ ಕಾರ್ಡುಗಳನ್ನು ಕೊಡಿಸುತ್ತೇನೆ ಎಂದು ಹೇಳಿದಿರಿ.

(ಗೊಂದಲ)

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ಫಾರಂನ್ನು ಇಷ್ಯೂ ಮಾಡಬೇಡಿ ಎಂದು ಹೇಳಿದರೆ ಸರ್ಕ್ಯುಲರ್ ಇದೆ. ಆದ್ದರಿಂದ ಫಾರಂನ್ನು ಇಷ್ಯೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಅದು ನಮಗೆ ಬಂದಿರುವ ಕಷ್ಟ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಪೆರಿಕಲ್ ಮಲ್ಲಪ್ಪನವರ ಕೊನೆಯ ಪ್ರಶ್ನೆ ಏನೆಂದರೆ ಹಿಂದಿನ ಆಹಾರ ಮಂತ್ರಿಗಳು ಎಂ. ಎಲ್. ಎ. ಗಳು ಲೆಟರ್ ಕೊಟ್ಟರೆ ರೇಷನ್ ಕಾರ್ಡ್ ಫಾರಂಗಳನ್ನು ಇಷ್ಯೂ ಮಾಡಬೇಡಿ ಎಂದು ಹೇಳಿದ್ದರು, ಅದು ಇಷ್ಯೂ ಆಸ್ತಿತ್ವದಲ್ಲಿದೆಯೇ ಎಂದು ಕೇಳುತ್ತಿದ್ದಾರೆ ಅಥವಾ ಅದನ್ನೆನಾದರೂ ವಾಪಸ್ ತೆಗೆದುಕೊಂಡಿದ್ದಾರೋ ಹೇಗೆ ಎಂದು ಕೇಳುತ್ತಿದ್ದಾರೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ಫಾರಂಗಳನ್ನು ಇಷ್ಯೂ ಮಾಡುವುದಕ್ಕೆ ಏನು ತೊಂದರೆ ಇದೆ ?

(ಗೊಂದಲ)

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಪೆರಿಕಲ್ ಮಲ್ಲಪ್ಪನವರು ನನ್ನ ಕೊಠಡಿಗೆ ಬಂದರೆ ನಾನು ನನ್ನ ಅಧಿಕಾರಿಗಳನ್ನು ಕರೆಸಿ ವಿಚಾರಿಸುತ್ತೇನೆ ಅವರು ಪಾಹಿತಿಗಳನ್ನೇನಾದರೂ ಕೊಟ್ಟಿದ್ದು ಕಾರ್ಡುಗಳನ್ನು ಕೊಟ್ಟಿಲ್ಲ ಎಂದು ಹೇಳಿದರೆ ಲೋಪ ವಾಗುತ್ತದೆ. ಪಾಹಿತಿಗಳನ್ನು ಕೊಡದಿದ್ದರೆ ಕಾರ್ಡುಗಳನ್ನು ಕೊಡುವುದಕ್ಕಾಗುವುದಿಲ್ಲ. ಮಾಹಿತಿ ಗಳನ್ನು ಕೊಟ್ಟು ಅಧಿಕಾರಿಗಳೇನಾದರೂ ಕಾರ್ಡುಗಳನ್ನು ಕೊಡದಿದ್ದರೆ ಅದನ್ನು ಕೊಡಿಸುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ನರಸಿಂಹಮೂರ್ತಿಯವರು ಆಹಾರ ಮಂತ್ರಿಗಳಾದ ಮೇಲೆ ಈಗ ಊಟ ಮಾಡದಿದ್ದರೂ ಕೂಡಾ ಹೊಟ್ಟೆ ತುಂಬಿದಂತಾಗುತ್ತದೆ.

ಅಧ್ಯಕ್ಷರು.—ತಾವೆಲ್ಲರೂ ಇವರ ಕೊಠಡಿಗೆ ಹೋಗಿ ಮಾತನಾಡಿ.

ಕುಟುಂಬ ಕಲ್ಯಾಣ ಯೋಜನೆ ಬಗ್ಗೆ

೨೩೧ ಶ್ರೀ ಎಂ. ನಾರಾಯಣಸ್ವಾಮಿ. (ಬೇತಮಂಗಲ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ೧೯೯೦ನೇ ಜನವರಿಯಿಂದ ಇಲ್ಲಿಯವರೆಗೆ ಕುಟುಂಬ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಎಷ್ಟು ಜನರಿಗೆ ಸಂತಾನಹರಣ ಶಸ್ತ್ರ ಚಿಕಿತ್ಸೆ ಮಾಡಲಾಗಿದೆ. ಜಿಲ್ಲಾವಾರು ಮಾಹಿತಿ ನೀಡುವುದು ?

ಆ) ಇವರುಗಳಲ್ಲಿ ಪುರುಷರು ಹಾಗೂ ಮಹಿಳೆಯರ ಸಂಖ್ಯೆ ಎಷ್ಟು ?

ಇ) ಇದಕ್ಕೆ ತಗುಲಿದ ವೆಚ್ಚವೆಷ್ಟು ?

ಶ್ರೀಮತಿ. ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು).—

ಅ) ೧೯೯೦ನೇ ಜನವರಿಯಿಂದ ಅಕ್ಟೋಬರ್ ಅಂತ್ಯದ ವರೆಗೆ ೨,೩೧,೨೮೪ ಜನರಿಗೆ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡಲಾಗಿದೆ. ಜಿಲ್ಲಾವಾರು ವಿವರಗಳನ್ನು ಲಗತ್ತಿಸಲಾಗಿದೆ.

ಆ) ಇವರುಗಳಲ್ಲಿ ೧೧೯೮ ಪುರುಷರು ಮತ್ತು ೨,೩೦,೦೮೬ ಮಹಿಳೆಯರಿದ್ದಾರೆ.

ಇ) ೧೯೯೦ನೇ ಜನವರಿಯಿಂದ ಈವರೆಗೆ ಮಾಡಲಾದ ವೆಚ್ಚ ಅಂದಾಜು ೪೭೧.೯೧ ಲಕ್ಷ ರೂ. ಗಳು.